ಸಂಬಂಧಪಟ್ಟ ಎರಡು ಹೆಣ್ಣುಮಕ್ಕಳಿದ್ದ ಹಟ್ಟಿಯತ್ತ ತಮ್ಮ ಪಾದಗಳನ್ನು ಬೆಳೆಸಿತ್ತು. ಮೃತ್ಯೂ ಸತ್ತ ಸುದ್ದಿ ಖಚಿತವಾಗುತ್ತಿದ್ದಂತೆಯೇ ಹಟ್ಟಿ ಮುಂದಿನ ಸಣ್ಣ ಪುಟ್ಟ ಕೆಲಸಕಾರ್ಯಗಳಲ್ಲಿ ಬೇಕಾಬಿಟ್ಟಿಯಂತೆ ತೊಡಗಿಸಿಕೊಂಡಿದ್ದ ಹೆಮ್ಮಕ್ಕಳೂ ತಮ್ಮ ಸೆರಗುಗಳಿಗೆ ಕೈ ಒರೆಸಿಕೊಳ್ಳುತ್ತಾ ಗಂಡಸರ ಪಾದಗಳೊಂದಿಗೆ ತಮ್ಮ ಪಾದಗಳನ್ನು ಬೆಳೆಸಿದ್ದರು.

★★★

ಸತ್ತ ಮೃತ್ಯೂನಾ ಪೂರಾ ಹೆಸರು ಮೃತ್ಯುಂಜಯ ಸ್ವಾಮಿ ಎಂದು. ಎಲ್ಲದರಲ್ಲೂ ತುಂಡ್ಹಾಕುವ ಪ್ರವೃತ್ತಿಯಲ್ಲಿದ್ದ ಹಳ್ಳೀಜನ ಅವನನ್ನು 'ಮೃತ್ಯೂ ಮೃತ್ಯೂ' ಎಂದೇ ಕರೆಯುತ್ತಿದ್ದದ್ದು. ಊರಿಗೆ ಅಪ್ಪಂಥವರು ಎನ್ನಿಸಿಕೊಂಡಿದ್ದ ಮಾಲಿಂಗಪ್ಪನೋರ ಕಿರಿಯ ಪುತ್ರನವ. ಅವರ ಹೆಂಡಿರು ಅಕಾಲಿಕವಾಗಿ ಗರ್ಭಹೊತ್ತು ಹೊಟ್ಟೇನಾಗಿದ್ದ ಕೂಸಿಗೆ ಏಳು ತಿಂಗಳಿಗೇ ಭೂಲೋಕವ ತೋರಿಸಿ ಅವನ ಹೆರಿಗೆಯಾಗೇ ಶಿವುನ ಪಾದ ಸೇರಿಕ್ಕಂಡಿದ್ದರು. ಅವ್ವ ಕಳಕಂಡು ದಿಕ್ಕೆಟ್ಟಿದ್ದ ಈ ಕೂಸು, ಮತ್ತದರ ಅಪ್ಪನಿಗೆ ದಿಕ್ಕಾಗಿ ಬಂದವಳು, ಪಾರೋತವ್ವ. ಈ ಪಾರೋತವ್ವ ಮಾಲಿಂಗಪ್ನೋರ ಹಿರೇಮಗಳು. ಇದ್ದೊಬ್ಬ ಮಗಳು ಗಂಡನನ್ನು ಕಳಕೊಂಡು ದಿಕ್ಕೆಟ್ಟು ಕುಂತಿದ್ದಳು. ಅವಳನ್ನೇ ತಮ್ಮಟ್ಟಿಗೆ ಕರೆತಂದಿದ್ದರು. ಮಗಳೊಂದಿಗೆ ಮೊಮ್ಮಗಳು ಗೌರಿಯೂ ಬಂದಿತ್ತು. ಅದಾಗ ನಾಕು ತಿಂಗಳ ಕೈಗೂಸಿರಬಹುದು.

ಏಳು ತಿಂಗಳಿಗೇ ಹುಟ್ಟಿ ಅವ್ವನನ್ನೂ ಕಳಕಂಡು, ಅವ್ವನೊಂದಿಗೇ ಟಿಕೇಟು ತೆಗೆದುಕೊಳ್ಳುವ ಆತುರದಾಗಿದ್ದ ಕೂಸಿಗೆ ಕಂಡ ಕಂಡ ದೇವರು ದಿಂಡರಿಗೆಲ್ಲ ಕೈಮುಗದು, ಶಾಸ್ತ್ರ ಪಾಸ್ತ್ರ ಕೇಳಿ, ಹತ್ತಾರು ಹರಕೆಗಳ ಕಟ್ಟಿಕೊಂಡು 'ಮೃತ್ಯುಂಜಯಸ್ವಾಮಿ' ಎಂದು ಹೆಸರು ಕಟ್ಟಿ ಆ ಕೂಸ ಬದುಕಿಸಿಕೊಂಡವಳು ಅಕ್ಕ ಪಾರೋತಕ್ಕ. ಈ ಮೃತ್ಯೂನಾ ದೆಸೆಯಿಂದಾಗಿಯೇ ಗೌರಿ ಅವ್ವನ ದೃಷ್ಟಿಯಿಂದ ಅರುಗಾಗಿಬಿಟ್ಟಿದ್ದಳು. ನ್ಯಾನೆಯಲ್ಲಿ ಮಲಗಿ ಕಿರ್ರೋ ಎಂದು ಅಳುವಾಗಿನಿಂದ ಹಿಡದು ಈತನಕ ಗೌರಿ ಪಾರೋತಕ್ಕನಿಗೆ ಕಾಣಿಸಿಕೊಳ್ಳಲೇ ಇಲ್ಲ. ಆ ಹೆಣ್ಣು ಕಣ್ಣೀರು ಸಿಂಬಳಗಳ ಸುರಿಸುತ್ತಾ, ತಲೆಯನ್ನೂ ಕೀಚುವವರಿಲ್ಲದೆ, ಏನು ಎತ್ತ ಎಂದು ವಿಚಾರಿಸುವವರಿಲ್ಲದೆ ಒಂಟಿಯಾಗಿ ಜಗುಲಿಮ್ಯಾಲೆ ಕೂತಿರುತ್ತಿದ್ದು, ಆ ಕೂಸ ಕಡೆ ಮಾಲಿಂಗಪ್ನೋರೇ ಮಗಳ ಗಮನ ಸೆಳೆಯಬೇಕು; "ಆ ಕೂಸ್ ಕಡೇನೂ ವಸಿ ನೋಡವ್ವಾ. ಹೆಂಗೆ ಒಣೀಕಂಡದೆ ನೋಡು."

ಮೃತ್ಯೂ ಉಳಕೊಂಡ, ಬೆಳೆದೇ ಬೆಳೆದ. ಪಾರೋತವ್ವನ ಹೆಣ್ಣು ಸೀದುಕೊಂಡು ನಿಂತಿತ್ತು. ಊರವರ ನಗೆಸಾರ ಆರಂಭವಾಗಿತ್ತು. ಒಂದೇ ಹಟ್ಟಿಯಲ್ಲಿದ್ದ ಅಕ್ಕ, ಅಕ್ಕನ ಮಗಳು... ಸಂಬಂಧ ಬೆಸೆದೇ ಬಿಟ್ಟಿದ್ದರು; 'ಮೃತ್ಯೂನ ಹೆಂಡತಿ' ಎಂದು. ಜನ ಆ ಕೂಸ ಗೌರಿ ಎಂದು ಕರೆದದ್ದೇ ಕಡಿಮೆ. ಅದ ಕೇಳಿಸಿಕೊಂಡು ಪಾರೋತವ್ವ ಸುಖಿಸುವಳು. ನಗುವಳು. ಆ ಎಣ್ಣು ಏನೂ ಅರ್ಥವಾಗದಿರಲು ತನ್ನ ಬೆಳ್ಳುಗೊಂಡ ಕಣ್ಣ ಪಿಳಿಪಿಳಿ ಬಿಡುವುದು. ಸಾಯುತ್ತಿದ್ದ ಕೂಸ, ಬೀಳುತ್ತಿದ್ದ ಹಟ್ಟಿಯ ಉಳಿಸಿಕೊಟ್ಟ ಮಗಳಲ್ಲಿ ಮಾಲಿಂಗಪ್ಪನೋರು ವಿಶೇಷ ಋಣಿಗಳಾಗಿದ್ದರು.

ಮೃತ್ಯೂನಾ ಮೈ ಬೆಳೆದಿದ್ದಷ್ಟೆ ಬುದ್ಧಿ ವಿದ್ಯೆ ಬೆಳೆಯುವುದು ಕಷ್ಟ ಎಂಬುದಾಗಲೇ ಕಾಣಿಸಿಕೊಳ್ಳಲಾರಂಭಿಸಿತ್ತು. ಅವನಿಗಿಂತ ವಯಸ್ಸಿನಲ್ಲಿ ಬಹಳವೇ ಹಿರಿಯರಾಗಿದ್ದ ಅವರ ಇಬ್ಬರು ಅಣ್ಣಂದಿರು ಓದು, ಬರಹವಾ ಕಲಿತು ಎದೆಗೆ ಬಿದ್ದ ಅಕ್ಷರಗಳ ಅರಳಸಿಕೊಂಡು ಯಥೋಚಿತ ಸ್ಥಾನಮಾನಗಳಲ್ಲಿ ಪ್ರತಿಷ್ಠಾಪಿತರಾಗಿರುವಂಥ ಕಾಲದಾಗೆ ಮೃತ್ಯೂ ಎಸ್ಸೆಸ್ಸೆಲ್ಸಿ ಪರೀಕ್ಷೆಗೆ ಮಣ್ಣು ಹೊರುತ್ತಿದ್ದ. ಜೊತೆಯಲ್ಲಿ ಗೌರಿಯೂ!

ಗೌರಿ ಚೆನ್ನಾಗಿಯೇ ಓದುತ್ತಿದ್ದ ಕೂಸು. ಅವಳಿಗೆ ಪಾಠ ಹೇಳುವ ಮೇಡಂಗಳೇ ಹಟ್ಟೀತನಕ ಬಂದು ಅವಳ ವಿದ್ಯೆಬುದ್ಧಿಯ ಗುಣಗಾನ ಮಾಡಿದ್ದರು. ಪಾರೋತಕ್ಕ ಮಾತ್ರ, "ನಮ್ ಮೃತ್ಯೂ ಹೆಂಗೆ